ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
**Bangalore Development Authority**

ಸಂಖ್ಯೆ :
No. ಬೆಂಅಪ್ರಾ/ನಮ/ಅಸ/ಅಅ-2/ತಾಸ-3/ಉ/ 09 /2021-22

ದಿನಾಂಕ :
Date : 08.10.2021

ಬೆಂಗಳೂರು
ಅನುಸೂಚಿ–ಎ ರಿ
(ಉಪವಿಧಿ ಸಂಖ್ಯೆ: 4.1)

ಆಯುಕ್ತರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

## ನಕ್ಷೆ ಮಂಜೂರಾತಿ ಪತ್ರ

ಮಾನ್ಯ ಆಯುಕ್ತರವರು ಆದೇಶ ಸಂಖ್ಯೆ:312, ದಿನಾಂಕ: 17.04.2021 ರಂದು ನಕ್ಷೆ ಮಂಜೂರಾತಿಗೆ ಅನುಮೋದನೆ ನೀಡಿರುತ್ತಾರೆ. ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬಂಡಾಪುರ ಗ್ರಾಮದ ಸರ್ವೆ ನಂ. 36/1 & 37/1 ರಲ್ಲಿರುವ 01ಎಕರೆ-15ಗುಂಟೆ (5564.38 ಚ.ಮೀ) ವಿಸ್ತೀರ್ಣದ ಪ್ರದೇಶವಾಗಿರುತ್ತದೆ.

ಶ್ರೀಮತಿ/ಶ್ರೀ

ಶ್ರೀಮತಿ. ಶಿಲ್ಪ ಬತ್ತಿ
#509, 8ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ,
ರಾಜ್ ಮಹಲ್ ವಿಲಾಸ್, ಬೆಂಗಳೂರು – 560080.

ಮಾನ್ಯರೆ,

ನೀವು, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬಂಡಾಪುರ ಗ್ರಾಮದ ಸರ್ವೆ ನಂ. 36/1 & 37/1 ರಲ್ಲಿ ನಿರ್ಮಿಸಲು ಉದ್ದೇಶಿಸಿರುವ Basement Floor+Ground Floor+23 Upper Floors ಅಂತಸ್ತುಗಳು, ಒಟ್ಟು 162 ವಸತಿ ಘಟಕಗಳನ್ನೊಳಗೊಂಡ ಬಹುವಸತಿ ಕಟ್ಟಡವನ್ನು ನಿರ್ಮಾಣ ಮಾಡಲು ಈ ಕಛೇರಿಗೆ ಅರ್ಜಿ ಸಲ್ಲಿಸಿ, ನಕ್ಷೆ ಮಂಜೂರಾತಿ ಕೋರಿರುತ್ತೀರಿ, ನಕ್ಷೆ ಮಂಜೂರಾತಿಯನ್ನು ದಿನಾಂಕ: 08.10.2021 ರಿಂದ ದಿನಾಂಕ: 07.10.2023 ರವರೆಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಮಂಜೂರಾತಿ ಮಾಡಲಾಗಿದೆ ಎಂದು ಈ ಮೂಲಕ ನಾನು ತಿಳಿಯಪಡಿಸಿದ್ದೇನೆ.

Housiey.com

### ಪಾಲಿಸಬೇಕಾದ ಷರತ್ತುಗಳು

1. ಪ್ರಾಧಿಕಾರದ ನಗರ ಯೋಜನಾ ಸದಸ್ಯರ ವಿಭಾಗದಲ್ಲಿ ಕಟ್ಟಡ ನಕ್ಷೆ (BLP) ಅನುಮೋದನೆ ಪಡೆಯುವ ಸಮಯದಲ್ಲಿ ವಿಧಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
2. KSPCB / BWSSB / Fire force ಸಂಸ್ಥೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಪ್ರಾರಂಭಿಕ ಪ್ರಮಾಣ ಪತ್ರ ಪಡೆಯಲು ಮನವಿ ಮಾಡುವ ಸಮಯದಲ್ಲಿ ಈ ಕಛೇರಿಗೆ ಸಲ್ಲಿಸುವ ಷರತ್ತಿಗೊಳಪಟ್ಟಿದೆ.
3. ಅಭಿವೃದ್ಧಿದಾರರು ಕಟ್ಟಡದ ಕಾಮಗಾರಿ ಪ್ರಾರಂಭಿಸುವ ಮುನ್ನ ಸದರಿ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರುಗಳಿಗೆ ಶೌಚಾಲಯಗಳನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು ಹಾಗೂ ಸದರಿ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಇಲ್ಲವಾದಲ್ಲಿ ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗುವುದಿಲ್ಲ ಹಾಗೂ ನೀಡಲಾಗಿರುವ ನಕ್ಷೆ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆಯಿಲ್ಲದೆ ರದ್ದುಪಡಿಸಲಾಗುವುದು.
4. ಬಂಡಿದಾರಿ / ರಾಜ ಕಾಲುವೆ / ಮಳೆ ನೀರು ಚರಂಡಿ ಇನ್ನೂ ಯಾವುದೇ ತರಹದ ಖರಾಬು ಜಮೀನು ಸದರಿ ಜಮೀನಿನ ವಿಸ್ತೀರ್ಣದಲ್ಲಿ ಇದ್ದಲ್ಲಿ, ಆ ಪ್ರದೇಶವನ್ನು ಯಾವುದೇ ತರಹದ ನಿರ್ಮಾಣದ ಕಾರ್ಯವನ್ನು ಮಾಡುವಂತಿಲ್ಲ ಹಾಗೂ ಇತರ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದಲ್ಲ ಮತ್ತು ಅಂತಹ ಪ್ರದೇಶಕ್ಕೆ ಸೂಕ್ತ ರಕ್ಷಣೆ ಒದಗಿಸುವುದು.
5. ಅಭಿವೃದ್ಧಿದಾರರು ಭದ್ರತಾ ಸಿಬ್ಬಂಧಿಯವರನ್ನು ನೇಮಿಸಿ ಕಟ್ಟಡ ನಿರ್ಮಾಣದ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ವಾಹನ ಸಂಚಾರ ವ್ಯವಸ್ಥೆಯಲ್ಲಿ ಅಡಚಣೆ ಉಂಟಾಗದಂತೆ ವ್ಯವಸ್ಥೆ ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು, ಹಾಗೂ ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಸ್ವತ್ತಿನ ಒಳಭಾಗದಲ್ಲಿ ಅಳವಡಿಸಿ ನಿರ್ವಹಿಸುವುದು.

ಪು.ತಿ.ನೋ.



Scanned with CamScanner

6. ಕಟ್ಟಡದ ನಿರ್ಮಾಣ ವೆಚ್ಚವು ಪ್ರತೀ ಚದರ ಅಡಿಗೆ 650/-ಕ್ಕಿಂತ ಹೆಚ್ಚಾದಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಅಂದಾಜು ಮೊತ್ತದ ಶೇ 1% ರಷ್ಟು ಮೊತ್ತವನ್ನು ಪ್ರಾಧಿಕಾರಕ್ಕೆ ಭರಸತಕ್ಕದ್ದು.

7. ಅರ್ಜಿದಾರರು ಶಾಸನಬದ್ಧ ಸಂಸ್ಥೆಗಳಿಗೆ, ಬಿಡಿಎ / ಬಿಬಿಎಂಪಿ/ ನಗರ ಸಭೆ / ಪಂಚಾಯತ್ ಗೆ ಯಾವುದಾದರೂ ಬಾಕಿ ಶುಲ್ಕಗಳನ್ನು ಪಾವತಿಸಬೇಕಿದ್ದಲ್ಲಿ ಅಂತಹ ಸಂಸ್ಥೆಗಳು ವಿಧಿಸುವ ಶುಲ್ಕವನ್ನು ಪಾವತಿಸತಕ್ಕದ್ದು.

8. ಮಳೆ ನೀರು ಕೊಯ್ಲನ್ನು ಬೆಂಗಳೂರು ಜಲ ಮಂಡಳಿ ರವರು ನಿಗಧಿಪಡಿಸಿರುವಂತೆ ಕಡ್ಡಾಯವಾಗಿ ಅಳವಡಿಸುವುದು.

9. ಇಬ್ಬಗೆಯ ಕೊಳವೆ ವಿಧಾನವನ್ನು ಕುಡಿಯುವ ನೀರಿಗಾಗಿ ಹಾಗೂ ಇತರೆ ಉದ್ದೇಶಿತ ವ್ಯವಸ್ಥೆಗಳಿಗಾಗಿ ಅಳವಡಿಸುವುದು.

10. ಒಳಚರಂಡಿ ವ್ಯವಸ್ಥೆಗಾಗಿ ಸ್ಥಾಪಿಸಿದ ನೈರ್ಮಲ್ಯ ಶುದ್ಧೀಕರಣ ಘಟಕವನ್ನು (S.T.P) ಅಳವಡಿಸಿ ಹಾಗೂ ಶುದ್ಧೀಕರಿಸಿದ ನೀರನ್ನು ಮನೆಗಳಲ್ಲಿನ ಶೌಚಾಲಯ, Gardening ಹಾಗೂ ಗಿಡಮರ Lawn ಗಳಿಗಾಗಿ ಕಡ್ಡಾಯವಾಗಿ ಉಪಯೋಗಿಸತಕ್ಕದ್ದು ಮತ್ತು ಇದರಿಂದ ಉತ್ಪತ್ತಿಯಾಗುವ Sewage ಪೂರ್ಣ ನೀರನ್ನು ಯಾವುದೇ ಕಾರಣಕ್ಕೂ ಕೆರೆ/ಹಳ್ಳ/ಕಣಿವೆ/ಹೊಳೆಗೆ ಬಿಡತಕ್ಕದ್ದಲ್ಲ.

11. ಅಭಿವೃದ್ಧಿದಾರರು ಕಟ್ಟಡದ ಆವರಣಗಳಲ್ಲಿ ಗಿಡ ಮರಗಳನ್ನು ಬೆಳೆಸಿ ಪರಿಸರವನ್ನು ಸಂರಕ್ಷಿಸುವ ಷರತ್ತಿಗೆ ಬದ್ಧರಾಗಿರತಕ್ಕದ್ದು.

12. ಅಭಿವೃದ್ಧಿದಾರರು ಕಟ್ಟಡಗಳಿಗೆ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

13. ಅಭಿವೃದ್ಧಿದಾರರು ಟ್ರಾನ್ಸ್ ಫಾರ್ಮರ್ ಗಾಗಿ ಗುರುತಿಸಿರುವ ಪ್ರದೇಶದಲ್ಲಿ ಅಳವಡಿಸತಕ್ಕದ್ದು, ಬೇರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

14. ಅಭಿವೃದ್ಧಿದಾರರು ಕಟ್ಟಡದ ಸುರಕ್ಷತೆ ಹಾಗೂ ಭದ್ರತೆಯ, ಕಟ್ಟಡದ ರಚನಾತ್ಮಕ ವಿನ್ಯಾಸದ ಬಗ್ಗೆ ಸಂಪೂರ್ಣವಾಗಿ ಜವಾಬ್ದಾರರಾಗಿರತಕ್ಕದ್ದು. ಕಟ್ಟಡದ ರಚನಾತ್ಮಕ ವಿನ್ಯಾಸದ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯ ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ಹೊಂದಿರುವುದಿಲ್ಲ. ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣಕ್ಕೆ ಕಾರ್ಮಿಕರು ಹಾಗೂ ನಿರ್ಮಾಣದ ಬಗ್ಗೆ ಎಲ್ಲಾ ಸೂಕ್ತ ಕ್ರಮಗಳನ್ನು ಅಳವಡಿಸಿಕೊಳ್ಳತಕ್ಕದ್ದು, ನಿರ್ಮಾಣ ಸಮಯದಲ್ಲಿ ಯಾವುದೇ ತರಹದ ಅನಾಹುತ ಅಥವಾ ಪ್ರಾಣ ಹಾನಿಯಾಗದಂತೆ ಕಟ್ಟುನಿಟ್ಟಿನ ಎಚ್ಚರವಹಿಸತಕ್ಕದ್ದು, ಯಾವುದೇ ತರಹದ ಅನಾಹುತಕ್ಕೆ ಗುತ್ತಿಗೆ ಪಡೆದ ನಿರ್ಮಾಣದಾರರು ನೇರ ಜವಾಬ್ದಾರರಾಗಿರುತ್ತಾರೆ. ಅಂತಹ ಪ್ರಸಂಗ ಕಂಡುಬಂದಲ್ಲಿ ಕಾನೂನು ಕ್ರಮ ಜರುಗಿಸುವುದಲ್ಲದೆ ನೀಡಲಾಗಿರುವ ಮಂಜೂರಾತಿಯು ತಂತಾನೆ ರದ್ದಾಗುತ್ತದೆ.

15. ಅಭಿವೃದ್ಧಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಅಥವಾ ಇನ್ಯಾವುದೇ ಕಟ್ಟಡದ ಅನುಪಯುಕ್ತ ಸಾಮಗ್ರಿಗಳಿಂದ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು. ಇದಕ್ಕೆ ಅನುಗುಣವಾಗಿ ಬ್ಯಾರಿಕೇಡಿಂಗ್ ಅನ್ನು ಅಳವಡಿಸಿ ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು.

16. ಯೋಜನೆಯಲ್ಲಿ ಘನ ತ್ಯಾಜ್ಯಗಳನ್ನು ಪ್ಲಾಸ್ಟಿಕ್ ಹಾಗೂ ಇತ್ಯಾದಿಯಾಗಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು ಹಾಗೂ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

17. ಕಟ್ಟಡದ ಕಾಮಗಾರಿ ಆರಂಭಿಸುವ ಮುನ್ನ ಅರ್ಜಿದಾರರು ಲೈಸನ್ಸ್ ಅನ್ನು ಸ್ಥಳೀಯ ಸಂಸ್ಥೆಯಿಂದ ಪಡೆಯತಕ್ಕದ್ದು.

18. ಗೌರವಾನ್ವಿತ ರಾಷ್ಟ್ರೀಯ ಹಸಿರು ನ್ಯಾಯಪೀಠ ರವರ ಪತ್ರ ಸಂಖ್ಯೆ: PCB/031/C&D/ 2016/5392/2020-21, ದಿನಾಂಕ: 25.02.2021 ರಂತೆ Construction and Demolition (C & D) ಕಸವನ್ನು ವಿಲೇ ಮಾಡುವ ಬಗ್ಗೆ ನಿರ್ವಹಣೆ ಯೋಜನೆಯನ್ನು ULB (Urban Local Body) ರವರಿಗೆ ಸಲ್ಲಿಸಿ ಅನುಮೋದನೆ ಪಡೆದು ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡುವ ಮುನ್ನ ಸಲ್ಲಿಸುವುದು.

19. ಕಟ್ಟಡ ನಿರ್ಮಾಣ ಸಮಯದಲ್ಲಿ ಸೆಂಟರಿಂಗ್ ಅಥವಾ ಇನ್ನಿತರೇ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದ್ದಲ್ಲಿ ಅದಕ್ಕೆ ಅಭಿವೃದ್ಧಿದಾರರೇ ಜವಾಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರು ಮಾಡಿದ ಯಾವುದೇ ಇಲಾಖೆ / ಸಂಸ್ಥೆಯು ಜವಾಬ್ದಾರರಾಗಿರುವುದಿಲ್ಲ.

20. ಅಭಿವೃದ್ಧಿದಾರರ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲಿಕತ್ವದ ಬಗ್ಗೆ ಯಾವುದೇ ನ್ಯಾಯಾಲಯದಿಂದ ನಿರ್ದೇಶನ ಬಂದಲ್ಲಿ ಹಾಗೂ ತಪ್ಪು ಮಾಹಿತಿ / ದಾಖಲಾತಿ ನೀಡಿದ್ದಲ್ಲಿ, ಅರ್ಜಿದಾರರಿಗೆ ಯಾವುದೇ ಮುನ್ಸೂಚನೆ ನೀಡದೆ ನಕ್ಷೆ ಅನುಮೋದನೆಯು ತನ್ನಿಂತಾನೇ ರದ್ದಾಗುತ್ತದೆ ಹಾಗೂ ಕಾನೂನು ರೀತ್ಯಾ ಸೂಕ್ತ ಕ್ರಮಕೈಗೊಳ್ಳಲಾಗುವುದು.

21. ಅಭಿವೃದ್ಧಿದಾರರು ಕುಡಿಯುವ ನೀರಿನ ಸರಬರಾಜಿಗಾಗಿ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯನ್ನು ಅವಲಂಬಿಸದೆ ನೀರಿನ ಸರಬರಾಜಿಗಾಗಿ ತಮ್ಮ ಸ್ವಂತ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

22. ಅರ್ಜಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಾಲ ಕಾಲಕ್ಕೆ ವಿಧಿಸುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

Next Page...

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

Scanned with CamScanner

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ದಿನಾಂಕ :
Date :

ಸಂಖ್ಯೆ :
No.

23. ಕಟ್ಟಡ ನಿರ್ಮಾಣ ಸಮಯದಲ್ಲಿ ಸುತ್ತಮುತ್ತಲಿನ ಪ್ರದೇಶಕ್ಕೆ ಅನಗತ್ಯ ಶಬ್ದ ಮಾಲಿನ್ಯ ತಡೆಗಟ್ಟುವ ಸಂಬಂಧ, ನಿರ್ಮಾಣದ ಹೊರಭಾಗಗಳಿಗೆ ಅಗತ್ಯ ರಕ್ಷಣಾ ಕವಚವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರ ಸಲಹೆಯಂತೆ ಕಡ್ಡಾಯವಾಗಿ ಅಳವಡಿಸತಕ್ಕದ್ದು.
24. ಅಭಿವೃದ್ಧಿದಾರರು ವಾಹನ ನಿಲುಗಡೆಯ ಸ್ಥಳದಲ್ಲಿ ಕಡ್ಡಾಯವಾಗಿ ವಿದ್ಯುತ್ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್ ಗಳನ್ನು ಅಳವಡಿಸತಕ್ಕದ್ದು.
25. ಅಭಿವೃದ್ಧಿದಾರರು ಸಿಟಿ ಮಾಸ್ಟರ್ ಪ್ಲಾನ್ ಗಳಲ್ಲಿ ವಿದ್ಯುತ್ ವಾಹನಗಳ ಚಾರ್ಜಿಂಗ್ ಗಳಿಗೆ ಸೂಕ್ತವಾದ ಮೀಸಲು ಸ್ಥಳಗಳನ್ನು ಕಾಯ್ದಿರಿಸತಕ್ಕದ್ದು.
26. ಇತ್ತೀಚಿನ ಸರ್ಕಾರಿ ಆದೇಶ ಸಂಖ್ಯೆ: ನಅಇ/536/ಬೆಂಭೂಸ್ವಾ/2017, ದಿನಾಂಕ: 16.03.2019 ರನ್ವಯ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಪೀಲು ಸಂಖ್ಯೆ: 5016//2016 ರ ಷರತ್ತಿಗೊಳಪಟ್ಟಿರುತ್ತದೆ (NGT ಬಫರ್ ಗೆ ಸಂಬಂಧಿಸಿದಂತೆ).
27. ಅಭಿವೃದ್ಧಿದಾರರು ಬೆಟರ್ ಮೆಂಟ್ ತೆರಿಗೆ ಪಾವತಿಸುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದ ನೀಡುವ 45727-45730/2011 (ಬೆಂಅಪ್ರಾ), ದಿನಾಂಕ: 03.09.2012ರ ತೀರ್ಮಾನದ ವಿರುದ್ಧ ಪ್ರಾಧಿಕಾರವು ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿದ್ದು, ಮೇಲ್ಮನವಿಯ ಕುರಿತು ನ್ಯಾಯಾಲಯ ನೀಡುವ ತೀರ್ಪಿಗೆ ಬದ್ಧರಾಗಿರಲು ಷರತ್ತಿಗೆ ಒಳಪಡಿಸಲಾಗಿದೆ.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಪ್ರತಿಯನ್ನು :
ಕಾರ್ಯಪಾಲಕ ಅಭಿಯಂತರು (ಉ), ಆರ್.ಟಿ.ನಗರ ಬಿ.ಡಿ.ಎ ವಾಣಿಜ್ಯ ಸಂಕೀರ್ಣ, ಬೆಂಗಳೂರು ರವರ ಮಾಹಿತಿಗಾಗಿ.

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು 560 020
T. Chowdaiah Road, Kumarapark West, Bangalore.560 020, Facsimile : 2334 5799, E-mail:bda@vsnl.com

Scanned with CamScanner

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

No. ಬೆಂಅಪ್ರಾ/ಅಸ/ಅಅ-2/ತಾಸ-3/ಟಿ- /2021-22

ಅಭಿಯಂತರ ಸದಸ್ಯರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು ದಿನಾಂಕ: 27-04-2021

ಇವರಿಗೆ,
ಶ್ರೀಮತಿ ಶಿಲ್ಪ ಜತ್ತಿ,
#509, 8ನೇ ಮುಖ್ಯರಸ್ತೆ,
10ನೇ ಅಡ್ಡರಸ್ತೆ, ರಾಜ್ ಮಹಲ್ ವಿಲಾಸ್
ಬೆಂಗಳೂರು – 560 080.

## ಸೂಚನಾ ಪತ್ರ

*******

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬಂಡಾಪುರ ಗ್ರಾಮದ ಸರ್ವೆ ನಂ. 36/1 ಮತ್ತು 37/1 ರಲ್ಲಿನ 01 ಎಕರೆ-15 ಗುಂಟೆ (5564.38 ಚ.ಮೀ) ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ತಳ+ನೆಲ+23ಮೇಲಂತಸ್ತುಗಳುಳ್ಳ, 162 ವಸತಿ ಘಟಕಗಳನ್ನೊಳಗೊಂಡ ಬಹುವಸತಿ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ನೀಡಲು ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ: 312, ದಿನಾಂಕ 17.04.2021 ರಂದು ಅನುಮೋದನೆ ನೀಡಿರುವ ಮೇರೆಗೆ ಈ ಕೆಳಕಂಡ ಶುಲ್ಕಗಳನ್ನು ಬಿ.ಡಿ.ಎ ಆವರಣದಲ್ಲಿರುವ ಕೆನರಾ ಬ್ಯಾಂಕ್ / ಇಂಡಿಯನ್ ಓವರ್ಸೀಸ್ ಬ್ಯಾಂಕಿಗೆ ಪಾವತಿಸಲು ಸೂಚಿಸಿದೆ.

**ಅಕೌಂಟ್ ಕೋಡ್**

| ಅ.ಕೋಡ್ | ವಿವರಗಳು | ಪ್ರಸ್ತುತ ಪಾವತಿಸಿರುವ ಶುಲ್ಕ |
|---|---|---|
| 182 | ನಕ್ಷೆ ಪರಿಶೀಲನಾ ಶುಲ್ಕ | 1069245.00 |
| 191 | ನೆಲ ಬಾಡಿಗೆ | 1069245.00 |
| 189 | ಅಭಿವೃದ್ಧಿ ಶುಲ್ಕ | 47522.00 |
| 537 | ಕೊಳಚೆ ನಿರ್ಮೂಲನಾ ಶುಲ್ಕ | 11130.00 |
| 546 | ಕಾರ್ಮಿಕ ಕಲ್ಯಾಣ ನಿಧಿ | 1662320.00 |
| 493 | ಭದ್ರತಾ ಠೇವಣಿ | 1188050.00 |
| 183 | ನಕ್ಷೆ ಪ್ರತಿಗಳ ಶುಲ್ಕ | 32000.00 |
| 199 | ಕೆರೆ ಅಭಿವೃದ್ಧಿ ಶುಲ್ಕ | 139125.00 |
| | 'ಸಿ' ಜಿ.ಎಸ್.ಟಿ. 9% | 212143.00 |
| | 'ಎಸ್' ಜಿ.ಎಸ್.ಟಿ. 9% | 212143.00 |
| | **ಪಾವತಿಸಬೇಕಿರುವ ಒಟ್ಟು ಮೊತ್ತ** | **56,42,923.00** |

(ಐವತ್ತಾರು ಲಕ್ಷದ ನಲವತ್ತೆರಡು ಸಾವಿರದ ಒಂಬೈನೂರ ಇಪ್ಪತ್ತಮೂರು ರೂಗಳು ಮಾತ್ರ)

ಸಹಾಯಕ ಅಭಿಯಂತರರು
ಅಭಿಯಂತರ ಸದಸ್ಯರ ಕಛೇರಿ
ಬೆಂಅಪ್ರಾ ಬೆಂಗಳೂರು.

ಪ್ರತಿಯನ್ನು:-

ಮ್ಯಾನೆಜರ್, ಕೆನರಾ ಬ್ಯಾಂಕ್/ಇಂಡಿಯನ್ ಓವರ್ಸೀಸ್ ಬ್ಯಾಂಕ್, ಬಿ.ಡಿ.ಎ ಎಕ್ಸ್ ಟೆನ್ಷನ್, ಕೌಂಟರ್, ಕೆ.ಪಿ.ವೆಸ್ಟ್, ಬೆಂಗಳೂರು.

Housiey.com

Scanned with CamScanner

# BDA REMITTANCE CHALLAN

CANARA BANK
BDA Extn. Ctr., KP West, Bangalore

Telephone : 3445261

Challan No : 9966

Name : Mrs:SHILPA JATTI
Site No. SY NO 36/1, 37/1 BANDAPUR,A
FEDERAL BANK FDRLR5202109,2400502823 DTD 24.09.21

Layout / Scheme : General Administration    Layout Code : 0

| Nature of Remittance | A/c Code | Amount |
|---|---|---|
| Licence Fee | 182 | 1069245.00 |
| Ground Rent | 191 | 1069245.00 |
| Developmental Charges | 189 | 47522.00 |
| Slum Clearance Cess | 537 | 11130.00 |
| WORKERS WELFARE CESS | 546 | 1662320.00 |
| SECURITY DEPOSIT | 493 | 1188050.00 |
| PLAN COPY/RCDP MAP/REGN/RENWL CONTRA FEE | 183 | 32000.00 |
| LAKE DEVELOPMENT CESS | 199 | 139125.00 |
| Total | | 5218637.00 |

Sl. No.: 53456    Remittance mode : Clearing

## RECEIPT

Received Rs.****5218637.00 (Rupees FIFTY TWO LAKH EIGHTEEN THOUSAND SIX HUNDRED THIRTY SEVEN ONLY)

Date :27/09/2021

for Canara Bank

Branch

केनरा बैंक
CANARA BANK
27 SEP 2021
बी.डी.ए. कॉम्प्लेक्स शाखा, बेंगलूर-560 020
B.D.A. Complex Br., Bangalore-20

Manager / Manager

DENOMINATION

| | | | | | | | | |
|---|---|---|---|---|---|---|---|---|
| 1000 | X | = | 20 | X | = | 1 | X | = |
| 500 | X | = | 10 | X | = | Coins | | |
| 100 | X | = | 5 | X | = | | | |
| 50 | X | = | 2 | X | = | Total | | |

Note : Mere acceptance of the remittance by the Bank does not automatically confer on the payer benefits expected from such payments. The payer is expected to ensure compliance with the various requirements of BDA before necessary benefits accrue to him/her.

(Receipt issued against Pay Orders / Drafts subject to realisation)

Scanned with CamScanner

BDA REMITTANCE CHALLAN

CANARA BANK
BDA Extn. Ctr., KP West, Bangalore

Telephone : 3445261

Challan No : 9967

Name : Mrs:SHILPA JATTI
Site No. CONT OF CHALLAN NO 9966 ,

Layout / Scheme : General Administration

Layout Code : 0

| Nature of Remittance | A/c Code | Amount |
|---|---|---|
| GST | 530 | 212143.00 |
| GST | 530 | 212143.00 |
| Total | | 424286.00 |

Sl. No.: 53457

Remittance mode : Clearing

RECEIPT

Received Rs.*****424286.00 (Rupees FOUR LAKH TWENTY FOUR THOUSAND TWO HUNDRED EIGHTY SIX ONLY)

Date :27/09/2021

for Canara Bank

Manager / Sr. Manager

CANARA BANK
Branch Seal 27 SEP 2021
B.D.A. Complex Br., Bangalore-20

DENOMINATION

| | | | | | | | | |
|---|---|---|---|---|---|---|---|---|
| 1000 | X | = | 20 | X | = | 1 | X | = |
| 500 | X | = | 10 | X | = | Coins | | |
| 100 | X | = | 5 | X | = | | | |
| 50 | X | = | 2 | X | = | Total | | |

Note : Mere acceptance of the remittance by the Bank does not automatically confer on the payer benefits expected from such payments. The payer is expected to ensure compliance with the various requirements of BDA before necessary benefits accrue to him/her.

(Receipt issued against Pay Orders / Drafts subject to realisation)

Scanned with CamScanner